# ಓದುಗರ ಸ್ಪಂದನ

## ಆದರ್ಶ ಕುಟುಂಬ

ಸರಿಯಾದ ಪರಿಸರವನ್ನು ಒದಗಿಸಿದಾಗ ಒಂದು ಬೀಜವು ಉತ್ತಮ ಮರವಾಗಿ ಬೆಳೆಯುತ್ತದೆ. ಹಾಗೆಯೇ ಶಿಶುವು ಬೆಳೆದು ಉತ್ತಮ ವ್ಯಕ್ತಿಯಾಗುವುದಕ್ಕೆ ಕೌಟುಂಬಿಕ ಪರಿಸರ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಕೌಟುಂಬಿಕ ಪರಿಸರವನ್ನು ಉತ್ತಮಗೊಳಿಸುವುದು ಉತ್ತಮ ಸಮಾಜ ನಿರ್ಮಾಣಕ್ಕೆ ಅತ್ಯವಶ್ಯಕವಾದುದು. ಆದರ್ಶ ಕುಟುಂಬ ಹೇಗಿರಬೇಕೆಂಬ ವಿಷಯವಾಗಿ ಓದುಗರ ಅಭಿಪ್ರಾಯವನ್ನು ಕೇಳಲಾಗಿತ್ತು. ಅವರು ಬರೆದು ಕಳಿಸಿದ ಅಭಿಪ್ರಾಯಗಳನ್ನು ಈ ತಿಂಗಳಿನಿಂದ ಪ್ರಕಟಿಸಲಾಗುತ್ತದೆ. ನಮ್ಮ ಕೋರಿಕೆಗೆ ಸ್ಪಂದಿಸಿದ ಓದುಗರೆಲ್ಲರಿಗೂ ನಮ್ಮ ಕೃತಜ್ಞತೆಗಳು.—ಸಂ.

**ಕು**ಟುಂಬವು ಮಾನವ ಸಮಾಜದ ಅತ್ಯಂತ ಮೂಲ ಭೂತವಾದ ಸಂಸ್ಥೆ. ಆಧುನಿಕ ಕುಟುಂಬದಲ್ಲಿ ಕಾಲದಿಂದ ಕಾಲಕ್ಕೆ ತನ್ನ ಸ್ವರೂಪ, ಕಾರ್ಯಗಳು ಮತ್ತು ದೃಷ್ಟಿಕೋನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇಂದು ಅವಿಭಕ್ತ ಕುಟುಂಬಗಳು ಬಹುತೇಕ ಕಾಣೆಯಾಗಿ, ಸಣ್ಣ ಸಣ್ಣ ಕುಟುಂಬಗಳಾಗಿ ಮಾರ್ಪಾಡಾಗಿವೆ. ಇದಕ್ಕೆ ವ್ಯಕ್ತಿಯ ಅತಿಯಾದ ಸ್ವಾರ್ಥ ಹಾಗೂ ಸಂಕುಚಿತ ಮನೋ ಭಾವನೆಯೇ ಕಾರಣವಾಗಿದೆ. ನಾನು, ನನ್ನದು, ನನಗಾಗಿ ಎನ್ನುವ ಧೋರಣೆ ಯಿಂದ ಕುಟುಂಬವನ್ನು ಸೀಮಿತಗೊಳಿಸಿ ಕೊಂಡು, ಆವಶ್ಯಕತೆಗಳನ್ನೂ ಅನುಕೂಲ ಗಳನ್ನೂ ಹೆಚ್ಚಿಸಿಕೊಂಡು ಮಿತಿಮೀರಿ ದುಡಿಯುತ್ತಾ ಮಾನಸಿಕ ಒತ್ತಡಗಳನ್ನು ಹೆಚ್ಚಿಸಿಕೊಂಡು ವ್ಯಕ್ತಿ ಪ್ರೀತಿ-ಮಮತೆ ಗಳಿಂದ ವಂಚಿತನಾಗಿದ್ದಾನೆ.

> ಮಕ್ಕಳು ನಿಮ್ಮನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ನೀವು ಅವರಿಗೆ ನೀಡಿದ ಭೌತಿಕ ಸೌಕರ್ಯಗಳಿಗಾಗಿಯಲ್ಲ, ನೀವು ಅವರ ಮೇಲೆ ಹರಿಸಿದ ಪ್ರೀತಿಗಾಗಿ.
>
> — ರಿಚಾರ್ಡ್ ಎಲ್. ಇವಾನ್ಸ್.

ಸ್ತ್ರೀ-ಪುರುಷರಿಬ್ಬರೂ ಕುಟುಂಬದ ಆಧಾರಸ್ತಂಭಗಳಿದ್ದಂತೆ. ಈರ್ವರೂ ಅವರವರ ಸ್ಥಾನದಲ್ಲಿ ಶ್ರೇಷ್ಠರಾಗಿದ್ದಾರೆ. ಸ್ತ್ರೀ-ಪುರುಷರ ಗುಣ-ಕರ್ಮ -ಸ್ವಭಾವ ಗಳು ಸಮಾನರೂಪವಾಗಿದ್ದು, ಅವರು ಸಮಾನ ಶೀಲ, ಸಮಾನ ಬುದ್ಧಿ, ಸಮಾನ ಆಚಾರ-ವಿಚಾರವಂತ ರಾದರೆ ಕುಟುಂಬದಲ್ಲಿ ಸತ್ಸಂಪ್ರದಾಯ, ರೀತಿ ನೀತಿಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಸತ್ಸಂತಾನವನ್ನು ಕೊಡುಗೆಯಾಗಿ ನೀಡುವಲ್ಲಿ ಯಶಸ್ವಿಗಳಾಗುತ್ತಾರೆ.

ಕುಟುಂಬದಲ್ಲಿ ಮಹಿಳೆಯ ಪಾತ್ರ ಅತ್ಯಂತ ಮಹತ್ವಪೂರ್ಣ ವಾಗಿದೆ. ಇಂದು ಸ್ತ್ರೀಯು ಅಡುಗೆ ಮನೆಗೇ ಸೀಮಿತವಾಗದೆ ಹೊರಗೆ ಪುರುಷನಿಗೆ ಸಮಾನವಾಗಿ ದುಡಿಯುತ್ತಿದ್ದಾಳೆ. ಮನೆಯಲ್ಲಿ ಮಕ್ಕಳ ಲಾಲನೆ-ಪಾಲನೆ, ದೈನಂದಿನ ಕೌಟುಂಬಿಕ ವ್ಯವಹಾರಗಳು, ಸುಖ-ಸೌಕರ್ಯಗಳು ಸ್ತ್ರೀಯ ಅಧೀನವಾಗಿರುತ್ತವೆ. ಮನೆಯ ಹಣಕಾಸಿನ ಸುವ್ಯವಸ್ಥೆ, ಅಡುಗೆ ವ್ಯವಸ್ಥೆ, ಸ್ವಚ್ಛತೆ, ಧರ್ಮ ಕಾರ್ಯಗಳು, ಸತ್ಸಂಗ, ಸ್ವಾಧ್ಯಾಯಾದಿಗಳಲ್ಲಿ ಕುಶಲಮತಿಯಾದ ಸ್ತ್ರೀಯ ಹೊಣೆಗಾರಿಕೆ ಹೆಚ್ಚಾಗಿದೆ.

ಪತಿ-ಪತ್ನಿಯರು ಪರಿವಾರದ ಇತರ ಸದಸ್ಯರೊಂದಿಗೆ ಸೌಮ್ಯ ಸ್ವಭಾವದವರಾಗಿ, ಶಾಂತ, ನಿಶ್ಚಲ, ಸಹನಶೀಲ ಹಾಗೂ ಹೃದಯ ವೈಶಾಲ್ಯವುಳ್ಳವರಾಗಿ ಉದಾರ ರೀತಿ ಯಲ್ಲಿ ವ್ಯವಹರಿಸುತ್ತ ಪರಸ್ಪರ ಪ್ರೇಮ ದಿಂದ ಅವರನ್ನು ಪಾಲಿಸುವಂತಹವ ರಾದರೆ ಅಂತಹ ಕುಟುಂಬದಲ್ಲಿ ಶಾಂತಿ- ಸಮಾಧಾನಗಳು ನೆಲೆಸಿರುತ್ತವೆ. ಪರಿವಾರ ದಲ್ಲಿನ ಪ್ರತಿಯೊಬ್ಬ ಸದಸ್ಯನೂ ಮನಸ್ಸನ್ನು ನಿಗ್ರಹಿಸಿ, ಮನಬಂದಂತೆ ವರ್ತಿಸದೆ, ಶಾಂತಿಯನ್ನು ಕಾಪಾಡುವಲ್ಲಿ ಎಚ್ಚರವಹಿಸಬೇಕು. ಇಲ್ಲವಾದರೆ, ವ್ಯಕ್ತಿಯ ಸ್ವಾರ್ಥ ಬಯಕೆಗಳು ಈಡೇರ ದಿದ್ದರೆ, ಕೋಪದ ಜ್ವಾಲೆಗಳು ಭುಗಿಲೆದ್ದು ಇಡೀ ಕುಟುಂಬದ ಸಂಘ ಟನೆ, ಸೌಂದರ್ಯ ಮತ್ತು ಸುಖ-ಶಾಂತಿಗಳು ಭಸ್ಮವಾಗಿಬಿಡುತ್ತವೆ.

ಮಾನವತೆಯಿಂದ ಓತಪ್ರೋತವಾದ ಪರಿವಾರ ಸದಾ ಸುಖಿ ಯಾಗಿರುತ್ತದೆ. ಕುಟುಂಬದ ಸದಸ್ಯರು ತಮ್ಮ ಅತ್ಯಲ್ಪ ಸ್ವಾರ್ಥ ಸಿದ್ಧಿಗಾಗಿ, ಮನುಷ್ಯತ್ವದಿಂದ ಜಾರದೆ, ಪರಿವಾರದ ಭವಿಷ್ಯದ ವಿಚಾರ ಮಾಡಿ, ಮಾನವತೆಯ ಉಚ್ಚ ಆದರ್ಶವನ್ನು ಎದುರಿಗಿರಿಸಿ ಕೊಂಡು ನಡೆದರೆ ಇಂದು ಪರಿವಾರಗಳಲ್ಲಿ ಕಂಡುಬರುವ ಕಲಹ- ಕ್ಲೇಶ-ವೈಮನಸ್ಸುಗಳಿಗೆ ದಾರಿಯೇ ಇರುವುದಿಲ್ಲ.

ಹೀಗೆ ಕುಟುಂಬದ ಸದಸ್ಯರು ಉದ್ಯೋಗಶೀಲರಾಗಿ, ತಮ್ಮ

ಆವಶ್ಯಕತೆಗಳನ್ನು ಆದಷ್ಟೂ ಕಡಿಮೆ ಮಾಡಿಕೊಂಡು ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಾ, ಮಿತವ್ಯಯಿಗಳಾಗಿ ತಮ್ಮ ಪರಿವಾರದ ಪಾಲನೆ-ಪೋಷಣೆಗೆ ಮಾತ್ರವಲ್ಲದೆ, ಸಮಾಜದ, ದೇಶದ ಆವಶ್ಯಕತೆಗಳನ್ನು ಗಮನಕ್ಕೆ ತಂದುಕೊಂಡು ಇತರರಿಗೆ ಸಹಾಯ ಮಾಡುವ ಪರಂಪರೆಯನ್ನು ಬೆಳೆಸಿಕೊಂಡು ಬರಬೇಕಾಗಿದೆ. ಇಂತಹ ಪರಿವಾರದಿಂದ ಸಮಾಜದ ಸ್ವಾಸ್ಥ್ಯವು ಹೆಚ್ಚಿ, ಇದು ಒಂದು ಆದರ್ಶ ಕುಟುಂಬವೆನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

— ಶ್ರೀಮತಿ ಎಮ್.ಗೌರಿ, ಮೈಸೂರು

ಸಮಾಜದ ಬಹು ಮುಖ್ಯ ಘಟಕವೇ ಕುಟುಂಬ. ಇಂದಿನ ತಾಂತ್ರಿಕ ಯುಗದಲ್ಲಿ ಅವಿಭಾಜ್ಯ ಕುಟುಂಬವಿದ್ದರೆ ಅದರಿಂದ ಕುಟುಂಬದ ಸದಸ್ಯರು ಬಹಳ ಅನುಕೂಲ ಪಡೆಯಬಹುದೆಂದು ನನ್ನ ಅಭಿಪ್ರಾಯ. ಇಂದಿನ ಜೆಟ್ ಯುಗದಲ್ಲಿ ಪೋಷಕರು ಇಲ್ಲವೇ ಅಧ್ಯಾಪಕರು ಬರಿ ಸ್ಪರ್ಧೆಯತ್ತ ಮಕ್ಕಳ ಮನವನ್ನು ಹರಿಸುವುದರಿಂದ ಅವರಿಗೆ ಮಾನಸಿಕ ಒತ್ತಡ ಉಂಟಾಗುತ್ತದೆ. ತಾನು ಮುಂದೆ ನಾನು ಮುಂದೆ ಎಂಬ ಭಾವನೆಯನ್ನು ಮೊದಲು ಹೋಗಲಾಡಿಸಬೇಕು. ಯಾವುದೇ ಕಾರ್ಯವನ್ನು ನಿರ್ವಹಿಸುವಾಗ ತುಂಬ ನಿರಾಳ ಮನಸ್ಸಿನಿಂದ ಮಾಡಬೇಕೆ ಹೊರತು ಒತ್ತಡದಿಂದ ಅಲ್ಲ. ಇನ್ನೊಂದು ಮುಖ್ಯ ಅಂಶ ಈ ಅವಿಭಾಜ್ಯ ಕುಟುಂಬದಲ್ಲಿ ಅನೇಕ ಸದಸ್ಯರು ಒಟ್ಟಿಗೆ ಇರುವುದರಿಂದ ಏನೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ಕಷ್ಟವಾಗುವುದಿಲ್ಲ.

ನೆನಪಿನಲ್ಲಿಡಬೇಕಾದ ಅಂಶವೆಂದರೆ ಅವಿಭಾಜ್ಯ ಕುಟುಂಬದ ಸದಸ್ಯರು ದೊಡ್ಡ ಮನಸ್ಸಿನವರು ಆಗಿರುವುದು ಬಹಳ ಮುಖ್ಯ. ಏನೇ ಭಿನ್ನಾಭಿಪ್ರಾಯವಿದ್ದರು ಅದನ್ನು ಸರಿಪಡಿಸಿಕೊಂಡು ಹೋಗುವಂತಾಗಿರಬೇಕು. ದ್ವೇಷ, ಅಸೂಯೆ ಎಲ್ಲವನ್ನೂ ಬಿಟ್ಟು ನಾವು ವಿಶ್ವಕುಟುಂಬಿಗಳು ಎಂಬ ಮನೋಭಾವವನ್ನು ಬೆಳೆಸಿಕೊಂಡರೆ ಎಂತಹ ವಿಷಮ ಸನ್ನಿವೇಶಗಳನ್ನಾದರೂ ಎದುರಿಸಬಹುದು.

ಹೆಚ್ಚಿನ ಕುಟುಂಬ ಕಲಹಗಳು ಬರುವುದು ಹಣಕಾಸಿನ ವ್ಯವಹಾರದಿಂದಲೇ. ಮನೆಯ ಹಿರಿಯರೊಬ್ಬರು ವ್ಯಾವಹಾರಿಕ ವಿಷಯದಲ್ಲಿ ಕುಟುಂಬದ ಇತರ ಸದಸ್ಯರನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಹಾಗೆ ಮಾಡುವುದು ತಪ್ಪು. ಇದರಿಂದಲೇ ಕುಟುಂಬದಲ್ಲಿ ಒಡಕು ಉಂಟಾಗುವುದು. ಕುಟುಂಬದ ಸುಖಸೌಲಭ್ಯಗಳಲ್ಲಿ ಎಲ್ಲರಿಗೂ ಸಮಪಾಲು ಇರಬೇಕು. ಈ ವಿಷಯದಲ್ಲಿ ಭೇದಭಾವವನ್ನು ಮಾಡಿದರೆ ಮನಸ್ತಾಪಕ್ಕೆ ಕಾರಣವಾಗುತ್ತದೆ. ಇದನ್ನೆಲ್ಲ ಒಂದು ಸೂಕ್ಷ್ಮ ದೃಷ್ಟಿಯಿಂದ ನೋಡಿ, ಒಳ್ಳೆಯ ತರದಲ್ಲಿ ಸಮಸ್ಯೆಗಳನ್ನು ಪರಿಹರಿಸಿಕೊಂಡು ಹೋಗುವುದು ಉತ್ತಮ.

ಈ ಎಲ್ಲ ಕಾರಣದಿಂದ ಸಾಮಾಜಿಕ ಸುಸ್ಥಿತಿಗೆ ವ್ಯವಸ್ಥಿತ ಕುಟುಂಬ ಜೀವನ ಅತ್ಯಾವಶ್ಯಕ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಷಯ. ಇಂದಿನ ಈ ಬದಲಾದ ಪರಿಸ್ಥಿತಿಯಲ್ಲಿ ಅವಿಭಾಜ್ಯ ಕುಟುಂಬ ಒಂದು ಆದರ್ಶ ಕುಟುಂಬವಾಗಿರಲು ಸಾಧ್ಯ.

— ಶ್ರೀಮತಿ ರೋಶಿನಿ ಪೊನ್ನಪ್ಪ, ಕುಶಾಲನಗರ.

**ನೂರಾರು ಜನರಿಂದ ಒಂದು ಪಾಳಯವಾಗಬಹುದು, ಆದರೆ ಒಂದು ಮನೆಯಾಗಲು ಒಬ್ಬ ಮಹಿಳೆ ಸಾಕು.**

**— ಚೈನೀ ಗಾದೆ**

ಇಂದಿನ ನಮ್ಮ ಸಮಾಜದಲ್ಲಿ ಆದರ್ಶ ಕುಟುಂಬಗಳು ಬಹಳ ವಿರಳ. ಇದ್ದರೂ ಬೆಳಕಿಗೆ ಬರುವುದಿಲ್ಲ. ಆ ಬಗ್ಗೆ ಹೇಳಹೊರಟರೆ ಅದು ನೋಡುವವನ ದೃಷ್ಟಿಕೋನವನ್ನವಲಂಬಿಸಿರುತ್ತದೆ. ಒಂದು ಕುಟುಂಬದ ಬಗ್ಗೆ ಅಧಿಕೃತವಾಗಿ ಹೇಳಬೇಕಾದರೆ ಮನಶ್ಶಾಸ್ತ್ರಜ್ಞರ ಪ್ರಕಾರ ಆ ಕುಟುಂಬದಲ್ಲಿ ೭ ವರ್ಷಗಳ ಕಾಲ ಜೀವಿಸಿ ಹಗಲೂ ರಾತ್ರಿ ಅವರ ಚಲನವಲನಗಳನ್ನು ಹಾವಭಾವಗಳನ್ನು ವೀಕ್ಷಿಸಿ ಈ ಅವಧಿಯ ಅನುಭವದ ಆಧಾರದಿಂದ ಮಾಹಿತಿಗಳನ್ನು ಸಂಗ್ರಹಿಸಬಹುದು ಅಷ್ಟೆ.

ದೇವರ ಸೃಷ್ಟಿ ವಿಚಿತ್ರ. ಒಬ್ಬನಂತೆ ಮತ್ತೊಬ್ಬನಿರುವುದಿಲ್ಲ, ಒಂದು ಸಂಸಾರದಂತೆ ಮತ್ತೊಂದು ಇರುವುದಿಲ್ಲ. ಇದಕ್ಕೆ ಸಂಸ್ಕಾರ, ವಾತಾವರಣ ಒತ್ತಡ, ಪ್ರಲೋಭನೆಗಳೇ ಕಾರಣ ಎನ್ನಬಹುದು. ದಂಪತಿಗಳಿಬ್ಬರೂ ಪಿಎಚ್.ಡಿ ಗಳಾದರೂ ಮನೆಯಲ್ಲಿ ಕಿರಿ ಕಿರಿ. ಹಳ್ಳಿಯ ಸಂಸಾರಗಳ ರೀತಿನೀತಿಗಳೆ ಬೇರೆಯಾಗಿರುತ್ತವೆ. ಇಂದಿನ ಸಮಾಜ ಕಲುಷಿತವಾಗುತ್ತಿರುವುದು ಮೂರು ವಸ್ತುಗಳಿಂದ. ಅವೇ ಹಣ, ಹೆಣ್ಣು, ಹೆಂಡ. ಇವುಗಳನ್ನು ಮೆಟ್ಟಿನಿಲ್ಲುವ ಶಕ್ತಿಯನ್ನು ಕಳೆದುಕೊಂಡು ಅವುಗಳಿಗೆ ದಾಸರಾಗಿ ಬದುಕುವವರಿಗೆ ಆದರ್ಶದ ಕುಟುಂಬದ ಕಲ್ಪನೆಯಾದರೂ ಹೇಗೆ ಬಂದೀತು?

ಆದರ್ಶ ಕುಟುಂಬದಲ್ಲಿ ಹಣ, ಐಶ್ವರ್ಯ, ಅಧಿಕಾರ, ರೂಪು, ಜಾತಿ, ಯೌವನ, ಬಲ ಇವು ಗೌಣವಾಗಿರುತ್ತವೆ. ಭೂತದಯೆ, ಪ್ರೀತಿ, ವಾತ್ಸಲ್ಯ, ವಿನಯ, ಸಹಬಾಳ್ವೆ, ನಿರಹಂಕಾರ, ದೇವರು-ಧರ್ಮದಲ್ಲಿ ಶ್ರದ್ಧೆ ಭಕ್ತಿ—ಇವು ಪ್ರಧಾನವಾಗಿರುತ್ತವೆ. ಸಂಸಾರದಲ್ಲಿ ದಂಪತಿಗಳು ವಿದ್ಯಾವಂತರು ಹಾಗೂ ಪ್ರಜ್ಞಾವಂತರಾಗಿದ್ದರೆ, ಎಲ್ಲರ ಹಿತದಲ್ಲಿ ತಮ್ಮ ಹಿತ ಅಡಗಿದೆ, ಸಾಮಾಜಿಕ ಅಭಿವೃದ್ಧಿಯನ್ನು ಕುರಿತ ಹಿತ ಚಿಂತನೆಯಲ್ಲಿ ನಮ್ಮ ಹಿತವೂ ಅಡಗಿದೆ ಎಂದು ತಿಳಿದು ಆಚರಿಸುತ್ತಾರೆ. ಆದರ್ಶ ಕುಟುಂಬದಲ್ಲಿ ಹೃದಯಸಂಸ್ಕೃತಿ ಇರುತ್ತದೆ. ಅವಿದ್ಯಾಮಾಯೆಯ ಅಟ್ಟಹಾಸಕ್ಕೆ ಸ್ಥಾನವಿರುವುದಿಲ್ಲ. ಪರಮಹಂಸರ ಶ್ರೀವಾಣಿಯಂತೆ ಸಾಂಸಾರಿಕ ಜೀವನ ಕಾಡಿಗೆ ಮನೆಯಲ್ಲಿ ವಾಸಿಸುವಂತೆ. ಎಷ್ಟು ಎಚ್ಚರಿಕೆಯಿಂದಿದ್ದರೂ ಮಸಿ ಅಂಟುತ್ತದೆ. ಆದ್ದರಿಂದ ವಿವೇಕ ಮತ್ತು ವೈರಾಗ್ಯ ಮನೋಭಾವವನ್ನು

ಮಾತರಂ ಪಿತರಂ ವೃದ್ಧಂ ಭಾರ್ಯಾಂ ಸಾಧ್ವೀಂ ಸುತಂ ಶಿಶುಮ್ ।
ಗುರುಂ ವಿಪ್ರಂ ಪ್ರಪನ್ನಂ ಚ ಕಲ್ಪೋಽಬಿಭ್ರಚ್ಛ್ವಸನ್ ಮೃತಃ ॥

"ತಂದೆತಾಯಿಯರನ್ನೂ ಹಿರಿಯರನ್ನೂ ಸಾಧ್ವಿಯಾದ ಮಡದಿಯನ್ನೂ ತನ್ನ ಮಕ್ಕಳನ್ನೂ ಸರಿಯಾಗಿ ನೋಡಿಕೊಳ್ಳದವನು, ಗುರುವನ್ನೂ ಸಜ್ಜನರನ್ನೂ ಆದರಿಸದವನು ಮತ್ತು ಆಶ್ರಯವನ್ನರಸಿ ಬಂದವನಿಗೆ ಆಶ್ರಯವನ್ನು ನೀಡದವನು ಉಸಿರಾಡುತ್ತಿದ್ದರೂ ಸತ್ತಂತೆ." — ಶ್ರೀಮದ್ಭಾಗವತ

ಬೆಳಸಿಕೊಳ್ಳಬೇಕು. ಈ ಮನೋಭಾವ ಕೇವಲ ಸಂನ್ಯಾಸಿಗಳಿಗೆ ಮಾತ್ರವಲ್ಲ, ಸಂಸಾರಸ್ಥರಿಗೂ ಅತ್ಯಂತ ಆವಶ್ಯಕ. ಈ ಮನೋಭಾವವೇ ಕುಟುಂಬದ ಬುನಾದಿಯಾಗಬೇಕು. ಆಗ ಅದು ಆದರ್ಶ ಕುಟುಂಬವಾಗುತ್ತದೆ.

— ಸಿದ್ಧರಾಮಯ್ಯ, "ಶಿರಡಿ ಪ್ರಸಾದ" ಬಿ. ಹಟ್ನ, ಮಂಡ್ಯ ತಾಲ್ಲೂಕು.

**ಒಂ**ದು ಕುಟುಂಬವು ಸಮಾಜಕ್ಕೆ ಹೇಗೆ ಆದರ್ಶಪ್ರಾಯವಾಗಿ, ಮಕುಟಮಣಿಯಾಗಿರಬೇಕೆಂಬುದನ್ನು ನೋಡೋಣ.

ಪ್ರತಿಯೊಂದು ಕುಟುಂಬಕ್ಕೂ ಆರ್ಥಿಕ ಭದ್ರತೆ, ಕುಟುಂಬದ ಸದಸ್ಯರುಗಳಿಗೆ ಮಾನಸಿಕ ಶಾರೀರಿಕ ದೃಢತೆ ಹಾಗೂ ನೈತಿಕ ನೆಲಗಟ್ಟು ಇರಬೇಕು. ತಮ್ಮ ದೈನಂದಿನ ಕೆಲಸ-ಕಾರ್ಯಗಳನ್ನು ಭಗವಂತನ ಉಪಾಸನೆಯಂತೆ ಮಾಡಬೇಕು.

ಜನಸಂಖ್ಯಾ ಸ್ಫೋಟದ ಪರಿಣಾಮವಾಗಿ ಶರವೇಗದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಗೃಹಸ್ಥರು ಸಂತಾನನಿಯಂತ್ರಣದ ಆವಶ್ಯಕತೆಯನ್ನು ಮನಗಂಡು ಶ್ರೀರಾಮಕೃಷ್ಣರ ಉಪದೇಶದಂತೆ ಎರಡು ಮಕ್ಕಳಾದನಂತರ ಪತಿ-ಪತ್ನಿಯರು ಸಹೋದರ ಸಹೋದರಿಯರಂತೆ ಬಾಳಬೇಕು. ಪ್ರಸ್ತುತದಲ್ಲಿ ಇದೇ ಪ್ರತಿಯೊಂದು ಕುಟುಂಬಕ್ಕೂ ಆದರ್ಶವಾಗಬೇಕಾಗಿದೆ.

ಕುಟುಂಬಕ್ಕೊಂದು ಆಧ್ಯಾತ್ಮಿಕ ಗ್ರಂಥಾಲಯವಿರಬೇಕು. ಟಿ.ವಿ (ಮೂರ್ಖರ ಪೆಟ್ಟಿಗೆ) ಯಲ್ಲಿ ನಾನಾವಿಧದ ಚಾನೆಲ್‌ಗಳನ್ನು ನೋಡಿ ತಲೆ ಬಿಸಿ ಮಾಡಿಕೊಳ್ಳುವುದರ ಬದಲಿಗೆ, ಶ್ರೀರಾಮಕೃಷ್ಣ ವಚನವೇದ, ಶಾರದಾದೇವಿ ಜೀವನಗಂಗಾ, ವಿವೇಕಪ್ರಭ ಮುಂತಾದ ಸದ್ಗ್ರಂಥಗಳನ್ನು ಅಧ್ಯಯನ ಮಾಡಿದಲ್ಲಿ ಜೀವನ ಸಾರ್ಥಕತೆ ಹೊಂದುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಕುಟುಂಬದ ಸದಸ್ಯವರ್ಗ ಮನೆಗೆ ಬಂದ ಅತಿಥಿಗಳನ್ನು ಆದರದಿಂದ ಸತ್ಕರಿಸಬೇಕು. ಪರಸ್ಪರರಲ್ಲಿ ನಂಬುಗೆ-ಪ್ರೀತಿ-ವಿಶ್ವಾಸವಿರಬೇಕು. ಕುಟುಂಬದಲ್ಲಿ ಸಮಸ್ಯೆ, ಕಲಹ, ಕೋಲಾಹಲ ತಲೆದೋರಿದಾಗ ಯಜಮಾನನಾದವನು ಸಾವಧಾನದಿಂದ ವರ್ತಿಸಬೇಕು, ಹಾಗೂ ಅನುಭಾವೀ ಹಿರಿಯರ ಮತ್ತು ಸಂನ್ಯಾಸಿಗಳ ಬಳಿ ಸಾರಬೇಕು.

ಕುಟುಂಬದ ಮಾಸಿಕ/ವಾರ್ಷಿಕ ವರಮಾನದಲ್ಲಿ ಸ್ವಲ್ಪ ಭಾಗವನ್ನು ಸುರಕ್ಷಿತ ರೀತಿಯಲ್ಲಿ ಕೂಡಿಡಬೇಕು. ಇದು ಭವಿಷ್ಯದಲ್ಲಿ ನೆರವಿಗೆ ಬರುವುದು.

ಪುರುಷನಾದವನು ಏಕಪತ್ನೀತ್ವವನ್ನು ಮತ್ತು ಸ್ತ್ರೀಯಾದವಳು ಏಕಪತಿತ್ವವನ್ನು ತಮ್ಮ ಜೀವನ ಪರ್ಯಂತ ಕಾಯ್ದುಕೊಳ್ಳಬೇಕು. ಇದರಿಂದ ಹತ್ತುಹಲವು ಸಮಸ್ಯೆಗಳನ್ನು ಹತೋಟಿಯಲ್ಲಿಡಬಹುದಾಗಿದೆ. ಸಮಾಜನಿರ್ಮಾಣ ಕಾರ್ಯದಲ್ಲಿ ಕುಟುಂಬದ ಪಾತ್ರ ಹಿರಿದು. ಬದಲಾಗುತ್ತಿರುವ ಸಮಾಜದಲ್ಲಿ ಕುಟುಂಬವು ತನ್ನ ಪ್ರತ್ಯೇಕತೆಯನ್ನು, ಗೌರವ-ಘನತೆಯನ್ನು ನಿಯಮ-ನಿಷ್ಠೆಯನ್ನು ಉಳಿಸಿಕೊಂಡು ದಾರಿದೀಪವಾಗಬೇಕಾಗಿದೆ.

— ಕೆ.ಎಸ್. ಉದಯಶಂಕರ್, ಗೌರಿಬಿದನೂರು

**ಭಾ**ರತೀಯ ಸಂಸ್ಕೃತಿಯಲ್ಲಿ ಆದರ್ಶ ಮಹಿಳೆಯು ಮೊದಲು ಆದರ್ಶಮಾತೆ. ಆನಂತರ ಪತ್ನಿ. ನಿಃಸ್ವಾರ್ಥತೆಯಿಂದಲೂ ಶಾಂತಿಯಿಂದಲೂ ಅತ್ತೆ ಮಾವಂದಿರ ಪತಿಯ ಮತ್ತು ಮಕ್ಕಳ ಸೇವೆ ಮಾಡಬೇಕು. ಇದರಿಂದ ಸಮಾಜದಲ್ಲಿ ಬಿರುಕು ಬರುವ ಸಾಧ್ಯತೆ ಇರುವುದಿಲ್ಲ. ತಾಯಿಯು ಸ್ಪರ್ಶಮಣಿಯಂತೆ ಎಲ್ಲವನ್ನೂ ತಿದ್ದಬೇಕು. ಅವಳ ದಿವ್ಯಸ್ಪರ್ಶವು ವ್ಯಕ್ತಿಯನ್ನು ಬಿನೋದಿನಿದಾಸಿಯ ಹೃದಯಸ್ಪರ್ಶಿ ಜೀವನದಂತೆ ಮಾಡಬೇಕು. ಅವಳು ಲೌಕಿಕ ಮತ್ತು ಆಧ್ಯಾತ್ಮಗಳೆರಡನ್ನೂ ಒಂದಾಗಿಸಬೇಕು.

ಕುಟುಂಬದಲ್ಲಿ ತಮಗಾಗಿ ಅಲ್ಲದೆ ಇತರರಿಗಾಗಿಯೂ ಬಾಳುವುದನ್ನು ಕುಟುಂಬದ ಸದಸ್ಯರೆಲ್ಲರೂ ಅರಿತಿರಬೇಕು. ಕಾರ್ಯದಕ್ಷತೆಯೊಂದಿಗೆ ಚಾರಿತ್ರ್ಯದಕ್ಷತೆ ಇರಬೇಕು. ಮಕ್ಕಳು ಪ್ರೌಢ ವಯಸ್ಸಿಗೆ ಬರುವ ಹೊತ್ತಿಗೆ ಸಾಮಾಜಿಕ ಹೊಣೆ, ವಿಶ್ವ ಭ್ರಾತೃತ್ವದ ಬಗ್ಗೆ ಹಿರಿಯರು ಅವರಿಗೆ ತಿಳಿಸಬೇಕು. ಒಟ್ಟಿನಲ್ಲಿ "ಧೂಳಿನ ಕಣವನ್ನು ಸಾಗರದ ಮುತ್ತಾಗಿ ಪರಿವರ್ತಿಸುವ ಚಿಪ್ಪಿನ ಹುಳದಂತೆ" ಕುಟುಂಬದ ಹಿರಿಯರು ತಾಳ್ಮೆಯಿಂದ ಮಕ್ಕಳನ್ನು ಪರಿವರ್ತಿಸಬೇಕು. ಮೌಲ್ಯವಂತ ಜೀವನಕ್ಕೆ ಬೆಲೆ ಕೊಟ್ಟು ಒಳ್ಳೆಯ ಕೆಲಸ ಮಾಡುವ ವ್ಯಕ್ತಿಗಳನ್ನು ನಿರ್ಮಿಸಬೇಕು. "ತಾಯಿ ಮಕ್ಕಳಿಗೆ ಪರಮ ರಕ್ಷೆ." ತಾಯಿಯ ದಯೆಯಿಲ್ಲದಿದ್ದರೆ ಇಡೀ ಪೃಥ್ವಿಯೇ ಶುಷ್ಕವಾಗಿ ಪರಿಣಮಿಸುತ್ತದೆ. ಆದರ ಆತಿಥ್ಯವೇ ಮನೆಯ ವೈಭವವಾಗಿರಬೇಕು. ತಾಯಿಯು ಮಕ್ಕಳಿಗೆ ಮೋಹರಹಿತ ವಾತ್ಸಲ್ಯವನ್ನು ನೀಡಬೇಕು. ಶಾರದಾಮಾತೆಯವರ ಆದರ್ಶ ಎಲ್ಲಾ ಕುಟುಂಬದ ಗೃಹಿಣಿಯರಲ್ಲಿ ಮೈಗೂಡಬೇಕು. ಇಂಥ ಕುಟುಂಬ ಆದರ್ಶವಾಗುತ್ತದೆ. ಒಟ್ಟಿನಲ್ಲಿ ಧಾರ್ಮಿಕತೆಯು ಆ ಮನೆಯ ಕಲಶವಾಗಬೇಕು.

— ಶ್ರೀಮತಿ ಅಶ್ವತ್ಥಮ್ಮ ಪ್ರಕಾಶ್, ತುಮಕೂರು.